

ಪಳಗಿಸಿ, ಮನೋರಂಜನೆಗೆ ಬಳಸಿಕೊಳ್ಳಲು ಸರ್ಕಾರ ಅಡ್ಡಿಮಾಡಲಿಲ್ಲ. ಈಗ ಕಾಡಲ್ಲೂ ಮಿಶ್ರ ತಳಿಗಳೂ ಇವೆ. ವರ್ಷಕ್ಕೆ ಶೇ. 23ರಷ್ಟು ಹೆಚ್ಚುತ್ತಿವೆ ಎನ್ನುವುದು ಖುಷಿತರುವ ಬದಲು ಕಳವಳವನ್ನು ಮೂಡಿಸಿದೆ. ಏಕೆಂದರೆ ಹುಲ್ಲುಗಾವಲನ್ನು ಸಂಪೂರ್ಣವಾಗಿ ಮೇಯುವುದಷ್ಟೇ ಅಲ್ಲ, ಅವು ಅಡ್ಡಾಡಿದ ನೆಲ ಗಟ್ಟಿಯಾಗಿಬಿಡುತ್ತದೆ, ಬೇರೆ ಯಾವ ಸಸ್ಯ ಪ್ರಭೇದಗಳೂ ಅಲ್ಲಿ ಹುಟ್ಟುವುದಿಲ್ಲ ಎನ್ನುವುದು ಇವುಗಳ ಬಗ್ಗೆ ಆರೋಪ. ಹೀಗಾಗಿ ಒಂದು ಹಂತದಲ್ಲಿ ಆಸ್ಟ್ರೇಲಿಯಾ ಹೆಲಿಕಾಪ್ಟರ್ ಬಳಸಿ, ಇವುಗಳನ್ನು ಅಡ್ಡಾಡಿಸಿ ಕೊಲ್ಲಿ ಎಂದು ನೀಡಿದ ಆದೇಶವನ್ನು ಸಾರ್ವಜನಿಕರು ಬಲವಾಗಿ ವಿರೋಧಿಸಿದರು. ಸಾವಿರಾರು ಮಂದಿ ದತ್ತು ತೆಗೆದುಕೊಳ್ಳಲು ಮುಂದಾದರು. ಈಗಲೂ ವನ್ಯಜೀವಿ ತಜ್ಞರು ಆಸ್ಟ್ರೇಲಿಯಾದ ಬೇರೆ ಬೇರೆ ಕಾಡುಗಳಲ್ಲಿರುವ ಕಾಡು ಕುದುರೆಗಳಿಗೆ ರೇಡಿಯೋ ಕಾಲರ್ ತೊಡಿಸಿದ್ದಾರೆ, ಅವುಗಳ ಸಂಚಾರದ ಬಗ್ಗೆ ನಿಗಾ ಇಟ್ಟಿದ್ದಾರೆ. ನೆಲವನ್ನು ಹೇಗೆ ಬಾಧಿಸುತ್ತವೆ ಎಂದು ಅರಿತಮೇಲೆ ಅವನ್ನು ಕೊಲ್ಲಬೇಕೇ, ಬಿಡಬೇಕೇ ಎಂಬ ಪ್ರಶ್ನೆಗೆ ಉತ್ತರ ಸಿಕ್ಕುತ್ತದಂತೆ. ಪ್ರಾಣಿಗಳನ್ನು ಕೊಲ್ಲಲು ವೈಜ್ಞಾನಿಕ ತಂತ್ರ ಎಷ್ಟರಮಟ್ಟಿಗೆ ದುರ್ಬಳಕೆಯಾಗುತ್ತದೆಂಬುದಕ್ಕೆ ಇದೊಂದು ನಿಚ್ಚಳ ಉದಾಹರಣೆ.

## ಯುದ್ಧಭೂಮಿಯಿಂದ ಕಾಡಿಗೆ

ಅಸ್ಸಾಂ ಎಂದೊಡನೆ ಅಲ್ಲಿನ ಹಸುರು ಚಹಾ ತೋಟ, ಭೋರ್ಗರೆದು ಹರಿಯುವ ಬ್ರಹ್ಮಪುತ್ರಾ ನದಿ ಹಾಗೆಯೇ ಅಪರೂಪದ ಘೇಂಡಾವನ ಥಟ್ಟನೆ ನಮ್ಮ ಕಣ್ಣಮುಂದೆ ನಿಲ್ಲುತ್ತವೆ ಅಲ್ಲವೆ? ಇದೇ ಅಸ್ಸಾಂನ ದಿಬ್ರೂಗರ್ ಭಾಗದಲ್ಲಿ ಬ್ರಿಟಿಷರು ಎರಡನೇ ಮಹಾ ಯುದ್ಧದಲ್ಲಿ ಅಶ್ವದಳವನ್ನು ಇಟ್ಟಿದ್ದರು. ಅವು ಎಷ್ಟರಮಟ್ಟಿಗೆ ಬಳಕೆಯಾದವೋ ಅದನ್ನು ಯಾರೂ ಕಂಡಿಲ್ಲ. ಯುದ್ಧಾನಂತರ ಆ ಕುದುರೆಗಳನ್ನು ಅಲ್ಲಿಯೇ ತೊರೆದುಬಿಟ್ಟರು. ಮಾಲೀಕರಿಗಾಗಿ ಕಾದು ಕೊನೆಗೆ ಅವು ಆಶ್ರಯ ಪಡೆದದ್ದು ದಟ್ಟ ಕಾಡಿನಲ್ಲಿ. ಅಲ್ಲಿಂದ ಮುಂದಕ್ಕೆ ಅವು ಕಾಡು ಕುದುರೆ. ಈಗ ದಿಬ್ರೂ–ಸೈಕೋವಾ ರಾಷ್ಟ್ರೀಯ ಉದ್ಯಾನವನದಲ್ಲಿ ಅವುಗಳನ್ನು ಸಂರಕ್ಷಿಸಿ ಇಡಲಾಗಿದೆ. ಈಗ ಅಂಡಲೆಯುತ್ತಿರುವ ಕಾಡು ಕುದುರೆಗಳು ನಾಲ್ಕನೆಯ ಪೀಳಿಗೆಯವಂತೆ. ಅವುಗಳ ದೌರ್ಭಾಗ್ಯವೆಂದರೆ ವನ್ಯಮೃಗಗಳ ಪಟ್ಟಿಯಲ್ಲಿ ಅವನ್ನು ದಾಖಲಿಸಿಲ್ಲ. ಆದ್ದರಿಂದ ವನ್ಯಮೃಗ ಸಂರಕ್ಷಣೆಯ ಕಾನೂನಿನಡಿ ಇವು ಬರುವುದಿಲ್ಲ.

1950ರಲ್ಲಿ ಅಸ್ಸಾಂನ ಬಹುಭಾಗ ಭೂಕಂಪನಕ್ಕೆ ತುತ್ತಾಗಿ ಸುತ್ತಣ ನದಿ ಹೊರಳಿದಾಗ ಈ ಕುದುರೆಗಳು ಎಲ್ಲೋ ಸಿಕ್ಕಿಹಾಕಿಕೊಂಡು ದ್ವೀಪದಲ್ಲಿರುವಂತೆ ಒಂದಷ್ಟು ದಿನ ಅನಾಥವಾಗಿ ಉಳಿದಿದ್ದವು. ಅವುಗಳನ್ನು ರಕ್ಷಣೆಮಾಡಿ ಮತ್ತೆ ಇದೇ ಉದ್ಯಾನವನಕ್ಕೆ ಬಿಡಲಾಯಿತು. ಈ ಉದ್ಯಾನ ತೀನ್‌ಸುಖಿಯಾಕ್ಕೆ ಕೇವಲ ಹನ್ನೆರಡು ಕಿಲೋ ಮೀಟರ್ ದೂರದಲ್ಲಿದೆ, 650 ಚದರ ಕಿಲೋ ಮೀಟರ್ ವಿಸ್ತೀರ್ಣವಿದೆ. ಅಸ್ಸಾಂ ಅರಣ್ಯ ಇಲಾಖೆ ಕೂಡ ಈ ಕಾಡಿನಲ್ಲಿ ಎಷ್ಟು ಸ್ತನಿಗಳಿವೆ, ಸರೀಸೃಪಗಳಿವೆ, ಹಕ್ಕಿಗಳಿವೆ ಎಂಬುದರ ಲೆಕ್ಕ ಕೊಡುತ್ತದೆಯೇ ವಿನಾ ಖಚಿತವಾಗಿ ಇಲ್ಲಿ ಇಷ್ಟೇ ಕುದುರೆಗಳಿವೆ ಎಂದು ಲೆಕ್ಕ ಕೊಡುವುದಿಲ್ಲ. ಅಲ್ಲಿನ ಪರಿಣತ ವನ್ಯ ಸಂರಕ್ಷಕರು ಹೇಳುವಂತೆ ಅಲ್ಲಿರುವುದು ಸುಮಾರು 70 ಕಾಡು ಕುದುರೆಗಳು. ವಿಷಾದವೆಂದರೆ ಇವು ತಮ್ಮ ನೆಲವನ್ನು ಬೆಂಗಾಲ ಹುಲಿ, ಚಿರತೆ, ಕರಡಿ, ಮುಂತಾದವುಗಳೊಂದಿಗೆ ಹಂಚಿಕೊಳ್ಳಬೇಕು. ಪ್ರತಿದಿನವೂ ಅವಕ್ಕೆ ಜೀವಭಯ. ಏಕೆಂದರೆ ಈ ಮೃಗಗಳು ಕಾಡು ಕುದುರೆಗಳ ರುಚಿನೋಡಿವೆ. ಈ ಉದ್ಯಾನವನದ ಕಾಡು ಕುದುರೆಗಳು ಬೇರೆಯ ನಾಡು ಕುದುರೆಗಳೊಂದಿಗೆ ಬೆರತಿಲ್ಲ. ಆದ್ದರಿಂದ ಅವು ಶುದ್ಧ ತಳಿ ಎಂಬುದು ಅರಣ್ಯ ಇಲಾಖೆಯ ಹೆಗ್ಗಳಿಕೆ. ಸರ್ಕಾರ ಇದನ್ನೇನೂ ಜಾಹೀರು ಮಾಡಿಲ್ಲ.

ಇದು ಹೇಗೂ ಇರಲಿ, ಈ ಉದ್ಯಾನವನ ಸದಾ ಗದ್ದಲದ ಬೀಡು. ಅಸ್ಸಾಂನ ಬಹು ದೊಡ್ಡ ತೈಲ ಮೂಲ ಈ ಭಾಗದಲ್ಲಿದೆ. ಆಯಿಲ್ ಇಂಡಿಯಾ ಕಂಪನಿ ಈ ಉದ್ಯಾನವನದ ಭಾಗದಲ್ಲೇ ತೈಲ ಬಾವಿ ಕೊರೆಯಲು ಪ್ರಾರಂಭಿಸಿದಾಗ, ಅದು ಹಸುರು ನ್ಯಾಯಾಧೀಶರ ಕೆಂಗಣ್ಣಿಗೆ ಗುರಿಯಾಯಿತು. ಕೇಂದ್ರದ ಪರಿಸರ ಅರಣ್ಯ ಇಲಾಖೆಗೆ, ಯಾವ ಆಧಾರದ ಮೇಲೆ ತೈಲ ಕಂಪನಿಗೆ ಅನುಮತಿ ನೀಡಿದ್ದೀರಿ ಎಂದು ಕೇಳಿ ನೋಟಿಸ್ ಕೊಟ್ಟಿದೆ. ವಾಸ್ತವವಾಗಿ ಈ ಭಾಗದಲ್ಲಿ ಕಾಡು ಕುದುರೆಗಳಿವೆ ಎಂಬ ಮಾಹಿತಿ ಪಡೆದು ಅವುಗಳನ್ನೂ ನೋಡಲೆಂದೇ ಪ್ರವಾಸಿಗಳು ಬರುವುದುಂಟು. ಅಲ್ಲಿನ ನದಿಗಳಲ್ಲಿ ದೋಣಿಯಲ್ಲಿ ಸಾಗಿ ಏವೆ ಇಕ್ಕದೆ ಅತ್ತಿತ್ತ ನೋಡುವುದೂ ಉಂಟು. ಕೆಲವರಷ್ಟೇ ಕಂಡೆವೆಂದು ಹೇಳುತ್ತಾರೆ. ಅಸ್ಸಾಂ ಸರ್ಕಾರಕ್ಕೆ ಪ್ರವಾಸಿಗರ ಆಕಾಂಕ್ಷೆ, ಕುತೂಹಲಗಳು ಮುಖ್ಯವೇ ಆಗಿಲ್ಲ. ಈ 70 ಕುದುರೆಗಳ ಸಂತಾನಾಭಿವೃದ್ಧಿ ಮುಂದೆ ಯಾವ ಹಂತ ತಲುಪುತ್ತದೋ ಹೇಳಲಾಗುವುದಿಲ್ಲ. ಏಕೆಂದರೆ ಬೇರೆಯ ಕಾಡು ಕುದುರೆಗಳ ಸಂಪರ್ಕವೂ ಇವಕ್ಕಿಲ್ಲ. ಹೀಗಾಗಿ ವೈವಿಧ್ಯ ತಳಿಗಳು ಹುಟ್ಟಲು ಅವಕಾಶವಿಲ್ಲ. ಕೇವಲ 75 ವರ್ಷಗಳ ಹಿಂದೆ ನಾಡ ಕುದುರೆಗಳಾಗಿ ಧಿಮಾಕಿನಿಂದ ಸವಾರರೊಡನೆ ಹೆಜ್ಜೆ ಇಡುತ್ತಿದ್ದ ಕುದುರೆಗಳು ಈಗ ಅಲೆಮಾರಿಗಳಾಗಿವೆ, ಬದುಕಲು ಹೋರಾಡುತ್ತಿವೆ.

ಜಗತ್ತಿನಾದ್ಯಂತ ಕಾಡು ಕುದುರೆಗಳ ಪಾಡು ಇದೇ.

ಪ್ರತಿಕ್ರಿಯಿಸಿ: feedback@sudha.co.in